ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 87/2016

(ಫ್ರಾಸಾ-6 ಚಾಸಾ-11)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 16.02.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರವೀಣ್ ಬಾಬು. ಜಿ. |
| ತಂದೆಯ ಹೆಸರು | - | ಗುರುಸಿದ್ದಯ್ಯ |
| ವಯಸ್ಸು | - | 51 ವರ್ಷ, |
| ಉದ್ಯೋಗ | - | ಪಿಐ, ಮಹದೇವಪುರ ಪೋಲಿಸ್ ಠಾಣೆ, ಬೆಂಗಳೂರು, |
| ವಾಸ | - | ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 8.05.2015 ರಿಂದ ದಿನಾಂಕ 05.06.2017 ರವರೆಗೆ ಸೋಲದೇವನಹಳ್ಳಿ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಇನ್ಸಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ದಿನಾಂಕ 31.12.2015 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 02.30 ಘಂಟೆ ಸಮಯದಲ್ಲಿ ಚಾಸಾ-1 ಠಾಣೆಗೆ ಹಾಜರಾಗಿ ನೀಡಿದ ಟೈಪ್ ಮಾಡಿದ್ದ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 384/2015 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿರುತ್ತೇನೆ. ದೂರು ಮತ್ತು ಪ್ರ.ವ.ವರದಿಯನ್ನು ಠಾಣಾ ಸಿಬ್ಬಂದಿಯ ಮುಖಾಂತರ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ಪ್ರತಿಗಳನ್ನು ಹಿರಿಯ ಅಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಈ ಪ್ರಕರಣವು ಎಸ್ ಸಿ ಎಸ್ ಟಿ ಪ್ರಕರಣವಾದ್ದರಿಂದ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-12 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು, ನಿಪಿ-4 ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು

ನಿಪಿ-4(ಬಿ) ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪ್ರ.ವ.ವರದಿಯನ್ನು ನಿಪಿ-9 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-9(ಎ) ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಲ್ ಎಸ್ ಕೆ ವಕೀಲರಿಂದಃ</u>**

2. ದಿಃ28.12.2015 ರ ಘಟನೆಗೆ ಸಂಬಂಧಪಟ್ಟಂತೆ 1 ನೇ ಆರೋಪಿಯು ನೀಡಿದ ಖಾಸಗಿ ದೂರಿನ ಅನ್ವಯ ದಿಃ28.02.2016 ರಂದು ಕ್ರೈಂ ನಂ.49/2016 ರಂತೆ ಚಾಸಾ-1, ಚಾಸಾ-7 ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿ. ದಿಃ31.12.2015 ರಂದು 1 ನೇ ಆರೋಪಿಯು ಚಾಸಾ-1 ಮತ್ತು 7 ಹಾಗೂ ಇತರರ ವಿರುದ್ಧ ಮಧ್ಯಾಹ್ನ 12.30 ಘಂಟೆಗೆ ದೂರು ನೀಡಿದ್ದು ಅದು ಕ್ರೈಂ ನಂ.383/2015 ರಲ್ಲಿ ಪ್ರಕರಣ ನಮ್ಮ ಠಾಣೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ನಾನು ದಾಖಲಿಸಿಲ್ಲ ಎಂದು ಹೇಳುತ್ತಾರೆ. 1 ನೇ ಆರೋಪಿಯು ಚಾಸಾ-1, 7 ಹಾಗೂ ಇತರರ ವಿರುದ್ಧ ನೀಡಿದ ದೂರಿಗೆ ಪ್ರತೀಕಾರವಾಗಿ ಈ ಪ್ರಕರಣದಲ್ಲಿರುವ ಸುಳ್ಳು ದೂರನ್ನು ಸಲ್ಲಿಸಿದ್ದು ನಾನು ಸರಿಯಾಗಿ ವಿಚಾರಣೆ ಮಾಡದೇ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು